Regd No BG 155. 1-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-0
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರನುನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇರಳದಲ್ಲಿ ಮಾರ್ಕ್ಸಿಸ್ಟ್ ಕಿಸಾನರಿಂದ ಆಜ್ಞೋಲ್ಲಂಘನೆ

ಟಿಬೆಟ್ ವಿಷಯದಲ್ಲಿ

★

ನವದೆಹಲಿ— ಚೀನಿಯ ಆಂತರ ರಾಷ್ಟ್ರೀಯ ಪರಿಸ್ಥಿತಿ ದೃಷ್ಟಿಯಲ್ಲಿ ಭಾರತವು ವಿಶ್ವ ಸಂಸ್ಥೆಯಲ್ಲಿ ತನ್ನ ನಿಲುವನ್ನು ಪುನರ್ವಿಮರ್ಶಿಸಬೇಕೆಂದು ಪ್ರಧಾನಿಯರಿಗೆ 202 ಮಂದಿ ಪಾರ್ಲಿಮೆಂಟು ಸದಸ್ಯರು ವಿನಂತಿ ಪತ್ರ ಸಲ್ಲಿಸಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈತೇರುವಂದು ತಕ್ಷಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಡ್ರೈವರ್ ಕವಿ

ನವದೆಹಲಿ— ಏರ್‌ಲೈನ್ಸು ಡ್ರೈವರಾಗಿರುವ ಸಾಲೂರು ಮಹಾದೇವ್ ನಂಬೂದರಿಪಾದರಿಗೆ ಅವರ ಮಲಯಾಳಿ ಕವಿತಾ ಸಾಮರ್ಥ್ಯಕ್ಕಾಗಿ ಕೇರಳ ಕ್ಲಬ್‌ನವರು ಸನ್ಮಾನಿಸಲಿರುವರು.

★

ನಾಗಾ ನಾಯಕ ಫೀಜೋ

ಕೊಹಿಮಾ — ಫೀಜೋರ ಈಗಿನ ಅಮೇರಿಕಾ ಭೇಟಿಯು ತಮ್ಮ ಭೂಗರ್ಭ ಜಲವಳಿಗೆ ಹಣ ನೆರವು ಪಡೆಯುವದಕ್ಕಾಗಿದೆ ಎಂದು ಹೇಳಲಾಗಿದೆ.

★

ಪಾರಿತೋಷಕ ವಿತರಣೆ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ಚಲನಚಿತ್ರ ಕಲಾವಿದರಿಗೆ ಪಾರಿತೋಷಿಕ ವಿತರಣೆ ನಡೆಯಿತು.

★

ರೈಲ್ವೇ ದಂಡೆಗೆ ಡೈನಾಮೈಟ್

ನವದೆಹಲಿ— ಅತಿ ಪ್ರವಾಹದಿಂದ ಜಲ ಪೈಗುರಿ ಪಟ್ಟಣವನ್ನು ರಕ್ಷಿಸಲು ಅನಿವಾರ್ಯ ಕಂಡರೆ, ಟೀಸ್ತಾ ನದಿಯ ರೈಲ್ವೇ ದಂಡೆಯನ್ನು ಉಡಾಯಿಸಲಾಗುವದೆಂದು ಕೇಂದ್ರಕ್ಕೆ ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ನಿರಾನರಿ ಮಂತ್ರಿಯವರು ತಿಳಿಸಿರುವರು.

★

ಪ್ರತ್ಯೇಕ ತೆಲಂಗಾಣ

ಹೈದರಾಬಾದು— ಕೇಂದ್ರ ಸರಕಾರವು ತತ್ವದಲ್ಲಾದರೂ ಪ್ರತ್ಯೇಕ ತೆಲಂಗಾಣಾ ಕೇಳಿಕೆಯನ್ನು ತಾ॥ 17 ರೊಳಗೆ ನಿರ್ಧರಿಸದಿದ್ದರೆ, ಪ್ರಜಾ ಸಮಿತಿ ಚಳವಳಿಯನ್ನು ತೀವ್ರಗೊಳಿಸುವದಾಗಿ ಘೋಷಿಸಿದೆ.

○

ಎಲ್ ಐ ಸಿ ನೆರವು

ನವದೆಹಲಿ— ಜೀವವಿಮಾ ಸಂಸ್ಥೆಯು ವಸತಿ ನಿರ್ಮಾಣ ಕಾರ್ಯಕ್ಕಾಗಿ ರೂ. ಕೋಟಿ ಕೊಡಲಿದೆ.

★

ಪ್ರಧಾನಿಗಳು ಸರ್ವಶ್ರೇಷ್ಠ

ಕೊಚ್ಚಿ— ಆಡಳಿತ ವಿಷಯ ಮತ್ತು ತನ್ನ ಸಹೋದ್ಯೋಗಿಗಳನ್ನು ಆರಿಸುವ ವಿಚಾರದಲ್ಲಿ ಪ್ರಧಾನಿಗಳು ಸರ್ವಶ್ರೇಷ್ಠ ಎಂದು ಕೇಂದ್ರ ನ್ಯಾಯಾಂಗ ಮಂತ್ರಿಗಳು ಹೇಳಿದರು.

★

ಸಿಟಿ ಕೊಆಪರೇಟಿವ್ ಬ್ಯಾಂಕಿನ ಹೊಸ ಡೈರಕ್ಟರುಗಳು

ಮೈಸೂರು— ನಿನ್ನೆ ನಡೆದ ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯಲ್ಲಿ ಆಯ್ಕೆಯಾದವರು— ಸರ್ವಶ್ರೀ ಡಾ ॥ ಬಿ ಜಿ ದಾಸ್, ಈರಪ್ಪ ಅಲಿಯಸ್ ಚೌಡಯ್ಯ, ಎಂ ಸಿ ಕೃಷ್ಣಸ್ವಾಮಿ, ಎ ಆರ್ ರಂಗರಾವ್ ಡಾ॥ ಎ ವಿ ರಂಗರಾವ್, ಜಿ ಆರ್ ಚನ್ನಕೇಶವಯ್ಯ ಅಲಿಯಸ್ ಪಾಪಣ್ಣಿ, ಎಂ ಎ ಸಂಪತ್ ಅಯ್ಯಂಗಾರ್, ಎಚ್ ಕೃಷ್ಣಮೂರ್ತಿರಾವ್, ಜಿ ಜನಾರ್ದನ ನಾಯ್ಡು, ಎ ಕೃಷ್ಣಮೂರ್ತಿರಾವ್, ಎಂ ಕೆ ರಾಮಕೃಷ್ಣ, ಎಚ್ ರಾಮಣ್ಣ, ಎಂ ಎಸ್ ಕೃಷ್ಣಾಜಿರಾವ್, ಎಸ್ ಪುಟ್ಟಣ್ಣಯ್ಯ, ಮತ್ತು ಎಂ ಆರ್ ಸಿ ಬಸಪ್ಪ.

★

ಪ್ರಧಾನಿಗಳ ಬಗ್ಗೆ ಆಕ್ಷೇಪ

ಮೀರತ್— ಪ್ರಧಾನಿ ಇಂದಿರಾರವರು ಬಲ ಕಮ್ಯೂನಿಸ್ಟರಿಗೆ ಬಹಳ ಹತ್ತಿರವಾಗುತ್ತಿದ್ದಾರೆಂದು ಪಾರ್ಲಿಮೆಂಟು ಸದಸ್ಯೆ ಶ್ರೀಮತಿ ತಾರಕೇಶ್ವರಿ ಸಿನ್ಹ ಹೇಳಿದರು — ಅವರು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಕಾಂಗ್ರೆಸ್ ಸಂಸ್ಥೆಯನ್ನು ತಮ್ಮ ವಶ ಮಾಡಿಕೊಳ್ಳಲು ಇಚ್ಛಿಸಿರುವರೆಂದೂ ಹೇಳಿದರು.

ರಾಜ್ಯಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ

ಬೆಂಗಳೂರು— ಅಧ್ಯಕ್ಷ ಶ್ರೀ ಗಿರಿಯವರು ರಾಜ್ಯಕ್ಕೆ ಸೆಪ್ಟಂಬರು ಎರಡನೇ ವಾರದಲ್ಲಿ ಭೇಟಿ ಕೊಡುವ ಸಂಭವವಿದೆಯೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ಹೌಸ್‌ಸರ್ಜನ್ನರ ನಿಯೋಗ

ಹುಬ್ಬಳ್ಳಿ— ಬೆಳಗಾಂ, ಮಂಗಳೂರು ಗುಲ್ಬರ್ಗ ಮತ್ತು ಹುಬ್ಬಳ್ಳಿ ಹೌಸ್ ಸರ್ಜನ್ನರ ನಿಯೋಗವು ಮುಖ್ಯ ಮಂತ್ರಿಗಳ ಕೊಡನೆ ಪರಿಸ್ಥಿತಿಯನ್ನು ಕಿರ್ಯಾಲೋಚಿಸಲು ತೆರಳಿದೆ.

ಮಾರ್ಕ್ಸಿಸ್ಟರಿಂದ ಶಾಸನೋಲ್ಲಂಘನೆ

ತ್ರಿವೇಂದ್ರಂ— ಮಾರ್ಕ್ಸಿಸ್ಟರ ನೇತೃತ್ವದಲ್ಲಿ ಕಿಸಾನರು ಶಾಸನೋಲ್ಲಂಘನೆ ಮಾಡುವ ಮತ್ತು ಭೂಮಾಲೀಕರಿಗೆ ಬೆಳೆಯನ್ನು ಕೊಡಲು ತಿರಸ್ಕರಿಸುವ ಕಾರ್ಯಕ್ರಮ ಮಾಡಿದ್ದಾರೆ — ಕೋರ್ಟುಗಳು ಮಾಡುವ ಆಜ್ಞೆ ಮತ್ತು ಡಿಕ್ರಿ, ಉಚ್ಚಾಟನೆಗೆ ಮನ್ನಣೆ ಕೊಡುವದಿಲ್ಲವಂತೆ.

ರೈಲು ಕಂಬ ತಪ್ಪಿದ್ದರಿಂದ

ಪಾಟ್ನಾ— ಜಮಾನಿಯ ಸ್ಪೇರ್ಷ ಹತ್ತಿರ ಡೆಲ್ಲಿಗೆ ಬರುತ್ತಿದ್ದ ತುಫಾ ಎಕ್ಸ್‌ಪ್ರೆಸ್‌ನ 9 ಗಾಡಿಗಳು ಕಂಬಿ ತಪ್ಪಿ 31 ಮಂದಿ ಗಾಯಗೊಂಡರು.

ರೂ 20655 ಜುಲ್ಮಾನೆ

ಬಿಜಾಪುರ—10 ವರ್ಷಗಳಿಂದ ಮೋಟಾರು ಟ್ಯಾಕ್ಸು ಕೊಡದಿದ್ದ ವಿಠಲ ಹನುಮಂತ ಕೊಡಗಿಗೆ ರೂ 20655 ಜುಲ್ಮಾನೆ ವಿಧಿಸಲಾಗಿದೆ.

ರೂ 466563

ನವದೆಹಲಿ— ರಾಷ್ಟ್ರೀಯ ಲೋಹಗಳ ಅಭಿವೃದ್ಧಿ ಸಂಸ್ಥೆಯು ಇಲ್ಲಿ ನಡೆಸಿದ ವಜ್ರಗಳ ಹರಾಜಿನಲ್ಲಿ ರೂ 466563 ಪಡೆದಿದೆ.

ದಿವ್ಯವಾಣಿ

ತಪ್ಪಿಗೆ ಮಾತ್ರ, ಸರ್ಕಾರದ ಬೆಂಬಲದ ಅವಶ್ಯಕತೆ ಇದೆ ; ಸತ್ಯವು ತಾನೇ ನಿಲ್ಲಬಲ್ಲದು. — ಥಾಮಸ್ ಜಫರ್ಸ್

(2)

ಇಲ್ಲೂ ನ್ಯಾಯಬೆಲೆ ಇಲ್ಲವೆ !

ಸಕಲೇಶಪುರ— ಇಲ್ಲಿಯ ನ್ಯಾಯಬೆಲೆ ಅಂಗಡಿಗಳು ಮತ್ತು ಸೊಸೈಟಿಗಳು ಸಕ್ಕರೆಯನ್ನು ಹೆಚ್ಚು ಬೆಲೆಗೆ ಮಾರುತ್ತಿರುವದನ್ನು ಹಾಸನ ಜಿಲ್ಲಾಧಿಕಾರಿಗಳ ಆಹಾರ ವಿಭಾಗ ಅಧಿಕಾರಿಯವರು ಪತ್ತೆಮಾಡಿದರು.

ಕೇಳಿಕೆ ದಿನ

ಹುಬ್ಬಳ್ಳಿ— ತಮ್ಮ ಕೆಳಿಕೆಗಳು ನೆರವೇರುವದಕ್ಕಾಗಿ ಗುರುವಾರ ಇಲ್ಲಿಯ ಜನ ಸಂಘವು ಆಚರಿಸಿದ ' ಕೇಳಿಕೆ ದಿನ " ದಲ್ಲಿ 100 ಸ್ವಯಂಸೇವಕರು ಭಾಗವಹಿಸಿದ್ದರು. ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ನಂತರ ತಾಸಿಲ್ದಾರರಿಗೆ ತಮ್ಮ 17 ವಿಷಯಗಳ ಕೇಳಿಕೆ ಕೊಟ್ಟರು.

ಜೂಜಿನ ಮನೆಯಲ್ಲಿ ಚಿನ್ನಾಭರಣ, ಗಡಿಯಾರ ವಶ

ಬಾಗಲಕೋಟೆ— ಇಳ್ಕಲ್‌ನಲ್ಲಿ ಪೋಲೀಸರು ಒಂದು ಮನೆ ಮೇಲೆ ಧಾಳಿ ನಡೆಸಿ, ರೂ 5000 ಬೆಲೆಯ ಚಿನ್ನಾಭರಣ ಮತ್ತು ಗಡಿಯಾರಗಳನ್ನು ವಶಪಡಿಸಿಕೊಂಡು 27 ಮಂದಿಯನ್ನು ದಸ್ತಗಿರಿ ಮಾಡಿದರು.

ಪೌರಸಭೆ

ಮೈಸೂರು— ಪೌರಸಭಾಧ್ಯಕ್ಷ ಶ್ರೀ ಎಂ ಎಸ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಅಧಿವೇಶನದಲ್ಲಿ, ಒಬ್ಬ ಸದಸ್ಯರು ಊರಿಂದ ವಿಳ್ಳೇದೆಲೆ ತೋಟ ತೆಗೆಯಬೇಕೆಂದು ಒತ್ತಾಯ ಮಾಡಿದರು ; ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲಿ ಸೀಟ್ ವಿತರಣೆ ಸರಿಯಾಗಿ ಆಗಬೇಕೆಂದು ಒಬ್ಬರು ಹೇಳಿದರು – ಹೌಸ್‌ಸರ್ಜನ್ನರ ಮುಷ್ಕರವನ್ನು ಒಬ್ಬರು ವಿರೋಧಿಸಿದರು ; ಕೋಸಲ ಸಮಿತಿ ಸಲಹೆಯಾದ ಚಲಚ್ಚಿತ್ರಗಳಲ್ಲಿ ಮುತ್ತಿಡುವ ಮತ್ತು ನಗ್ನತೆಯನ್ನು ಒಬ್ಬರು ತೀವ್ರವಾಗಿ ವಿರೋಧಿಸಿದರು.

ಹಂಗಾಮಿ ಗವರ್ನರ್

ಬೆಂಗಳೂರು— ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಸೋಮನಾಥ ಅಯ್ಯರ್ ರವರು ಹಂಗಾಮಿ ಗವರ್ನರರಾಗಿ ಪ್ರಮಾಣವಚನ ಸ್ವೀಕರಿಸಿದರು.

Golden Jubilee of 'Satyavadi'

The golden jubilee of the 'Satyavadi' is to be celebrat this month

The President, the Prime Minister, H H. the Maharaja Mysore and other personages have extended messages of felicr tations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty coopration, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಜಯಪ್ರದ 6 ನೇ ವಾರ

ವುಡ್‌ಲ್ಯಾಂಡ್ಸ್

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮೂ, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಆಮೋಘ 3 ನೇ ವಾರ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ನಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಷನ್
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana

ಗೋರಕ್ಷಣೆಗೆ ಮುಷ್ಕರ-ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4